ಅಧ್ಯಕ್ಷರೆ : ನಾನು ಅದನ್ನೆ ಹೇಳಿದ್ದುದು, ಅವರು ತಾವು ಪರಸ್ಪರ ಅನೇಕ ವಿಚಾರಗಳಲ್ಲಿ ರೆಡಿ ಇರಬಹುದು ನಾನು ರೆಡಿ ಇಲ್ಲ. I want the discussion to be concluded today. Kindly co-operate with me. You are a senior member.

Sri M. MALLIKARJUNA KHARGE : Sir, with folded hand I request You, sir ನಾವೇನು ಪದೇ ಪದೇ ಬಂದು ಧರಣಿ ಮಾಡುವುದು, ಸುಮ್ಮಸುಮ್ಮನೆ ಸಭಾತ್ಯಾಗ ಮಾಡುವುದು ಮಾಡುವುದಿಲ್ಲ. ಆದರೆ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ. ಇದು ಬಹಳ ನಾಜೂಕಾದಂಥ ಪ್ರಶ್ನೆ, ಬಹಳ ಗಂಭೀರವಾದುದು. ಆಮೇಲೆ ಇದು ಯಾವುದೇ ರೀತಿಯಿಂದ ಸುಪ್ರಿಂ ಕೋರ್ಟ್‌ನ ಜಡ್ಜ್‌ಮೆಂಟ್ ಮೇಲೆ ಪರಿಣಾಮ ಬೀರುವುದಿಲ್ಲ, ಇದು ಕೇವಲ ನಿಮ್ಮ ಕಂಡಕ್ಟ್ ಮೇಲೆ ನಿಮ್ಮ ಸರ್ಕಾರದ ನಡವಳಿಕೆ ಮೇಲೆ ಮಾತ್ರ ನಾವು ಚರ್ಚೆ ಮಾಡುತ್ತೇವೆಯೇ ಹೊರತಾಗಿ ಬೇರೆ ಯಾವುದರ ಮೇಲೂ ಕೂಡ ಇಲ್ಲ.

ಶ್ರೀ ಜಿ.ಹೆಚ್. ಪಟೇಲ್ : ಅದಕ್ಕೋಸ್ಕರವೆ ನಾನು ಮಾನ್ಯ ಅಧ್ಯಕ್ಷರಿಗೆ, ಏನು ಹೇಳಿದೆ ಅಂದರೆ ಇದರ ಬಗ್ಗೆ ಪೂರ್ತಿ ಮಾಹಿತಿ ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೋಸ್ಕರವೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ, ನಿಮ್ಮ ಹತ್ತಿರ ಫೈಲ್ ಇದೆ, ಬಾಕಿ ಎಲ್ಲಾ ವಿಷಯಗಳಿಗೂ ನೀವು ರಿಪ್ಲೈ ಮಾಡಬಹುದು ಅಂಥಾದ್ದರಲ್ಲಿ.....

ಶ್ರೀ ಜಿ.ಹೆಚ್. ಪಟೇಲ್ : ಅವರು ಈ ವಿಷಯದಲ್ಲಿ ಎಲ್ಲಾ all the dimensions of this problem is known to me ಅವರು ಅದಕ್ಕೋಸ್ಕರವೆ ದೆಹಲಿಗೆ ಹೋಗಿ ಮೂರು ದಿವಸ ಆಗಿದೆ, ಅವರು ನಾಳೆ ಬೆಳಿಗ್ಗೆ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ದೆಹಲಿಯಲ್ಲಿ ಸ್ಟಡಿ ಮಾಡುತ್ತಿದ್ದಾರೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹೌದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ನೀವು ಮಾಡಿಕೊಂಡು ಆಮೇಲೆ ದೇಶದ ಜನರಿಗೆ ಉತ್ತರ ಕೊಡಿ. ಇದು ಏನೆಂದರೆ, they are not ready, they are not open minded, ಏಕೆಂದರೆ ಅವರೇ ಮಾಡಿದ್ದನ್ನು ಅವರು ಸಮರ್ಥಿಸಿ ಕೊಳ್ಳುವುದಕ್ಕೋಸ್ಕರ ತಮ್ಮ ತೀರ್ಮಾನವನ್ನು ಸೇವ್ ಮಾಡುವುದಕ್ಕೋಸ್ಕರ ಮತ್ತು ಜನರಿಗೆ ಸಹಾಯ ಮಾಡುವುದಕ್ಕೋಸ್ಕರ ಈ ರೀತಿ ಮಾಡಿದ ಕೃತ್ಯಕ್ಕೆ ಬೇರೆಯವರಿಗೆ ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಇವತ್ತು ಕಳುಹಿಸಿದ್ದಾರೆ.ಅದಕ್ಕಾಗಿ ಇದರಿಂದಲೆ ಅವರಿಗೆ ಒಳ್ಳೆಯದಾಗುತ್ತಿತ್ತು ಅಂಥ ಅಂದರೆ ನಿಮಗೆ ಒಳ್ಳೆಯದಾಗಲಿ ಮತ್ತು ಈ ರೀತಿ ನಡವಳಿಕೆ ಇರತಕ್ಕಂಥದ್ದು ಚೆನ್ನಾಗಿಲ್ಲ. ಇದು ಯಾರಿಗೂ ಕೂಡ ಒಳ್ಳೆಯದಾಗತಕ್ಕಂಥದ್ದಲ್ಲ. ದಯವಿಟ್ಟು ಅಧ್ಯಕ್ಷರೆ,ಪುನಃ ತಾವು ಚರ್ಚೆಗೆ ಅವಕಾಶ ಕೊಟ್ಟರೆ ನಾವು ಕುಳಿತುಕೊಳ್ಳುತ್ತೇವೆ ಇಲ್ಲ ಅವರು ಕೊಡುವುದೇ ಇಲ್ಲ ಅಂಥ ಅಂದರೆ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀ ಸಗೀರ್ ಅಹಮದ್‌ರವರು ಹಾಗೂ ಕಾಂಗ್ರೆಸ್‌ನ ಇನ್ನಿತರ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)